**73209** M-603

Sl.No.

Total No. of Pages : 4

ಮೊದಲನೆಯ ಚತುರ್ಮಾಸ ಬಿ.ಎಸ್ಸಿ/ಬಿ.ಸಿ.ಎ. ಪರೀಕ್ಷೆ, ಮಾರ್ಚ್/ಏಪ್ರಿಲ್ 2021

(ಚತುರ್ಮಾಸ ಸ್ಕೀಮ್ : ಸಿಬಿಸಿಎಸ್)

**(2019 &20 ಮತ್ತು 2020-21 ರ ವಿದ್ಯಾರ್ಥಿಗಳಿಗೆ) (2018-19 ರ ವಿದ್ಯಾರ್ಥಿಗಳಿಗೆ)**

ಕನ್ನಡ ಭಾಷೆ (ಪತ್ರಿಕೆ–೧)

ವಿಜ್ಞಾನ ಗಂಗೋತ್ರಿ–೧

ಸಮಯ: 3 ಗಂಟೆಗಳು ಗರಿಷ್ಠ ಅಂಕಗಳು : 80

ವಿಭಾಗ–ಅ

**(2019 &20 ಮತ್ತು 2020-21 ರ ವಿದ್ಯಾರ್ಥಿಗಳಿಗೆ)**

ವಿಜ್ಞಾನ ಗಂಗೋತ್ರಿ– ೧ : ಪದ್ಯಭಾಗ (50 ಅಂಕಗಳು)

ಪ್ರ1) ಅ) ಒಂದರ ಭಾವವನ್ನು ಸಂದರ್ಭಸಹಿತ ವಿವರಿಸಿ: [5]

೧) ಕೊಳದ ಜಲ ನಿನ್ನ ಮನ: ಲೋಗರದರೊಳಗಿಳಿಯೆ
ತಳದ ಕಸ ತೇಲುತ್ತ ಬಗ್ಗಡವದಹುದು ॥
ಕಲಕದದ್ದದೆ ಕೊಂಚ ಬಿಟ್ಟಿದ್ದೊಡದು ಮರಳಿ
ತಿಳಿಯಹುದು ಶಾಂತಿಯಲಿ – ಮಂಕುತಿಮ್ಮ ॥

೨) ಒಂದಿಷ್ಟೇ ಇಷ್ಟು
ಹಸಿಮಣ್ಣು ನೀಡು ಗೆಳೆಯ
ಬೀಜ ಬಿತ್ತಿ, ಮೊಳಕೆಯೊಡೆದು
ಎತ್ತರೆತ್ತರದ ಮರವಾಗಿ ಬೀಗುತ್ತೇನೆ
ಹಕ್ಕಿ ಪಕ್ಷಿಗಳಿಗೆ ಆಸರೆಯಾಗುತ್ತೇನೆ
ಎಲ್ಲಾ ಒಂದಿಷ್ಟೆ ಇಷ್ಟು ಹಸಿ ಮಣ್ಣಿನಿಂದ !

ಆ) ಒಂದು ವಾಕ್ಯದಲ್ಲಿ ಉತ್ತರಿಸಿ: [5×1=5]

೧) ಡಿ.ವಿ.ಜಿ. ಯವರ ಪೂರ್ಣ ಹೆಸರೇನು?

೨) ಚೌರ್ಗೆಯಿಡ ಕಂಡ್ ಮಲ್ಲಿಯನ್ನು ಯಾವುದಕ್ಕೆ ಹೋಲಿಸಲಾಗಿದೆ?

೩) ಸಾರುವಯ್ಯ ಸಾರುತಲಿದ್ದದ್ದು ಎಲ್ಲಿ?

೪) ಕೆಮ್ಮಿ ಕೆಮ್ಮಿ ಕೆಮ್ಮಿ ಸಣ್ಣಾದವಳು ಯಾರು?

೫) ಮುಪ್ಪಿನಲ್ಲಿ ಮಗ ರಕ್ಷಿಸುತ್ತಾರೆಂದು ಯಾರು ಹೇಳಿದ್ದಾರೆ?

*P.T.O.*

https://www.uomonline.com

*ಪ್ರ2)* ಮೂರು ವಾಕ್ಯಗಳನ್ನು ಸಂದರ್ಭಸಹಿತ ವಿವರಿಸಿ: [3×4=12]

೧) ಇರುವ ಕೆಲಸವ ಮಾಡು ಕಿರಿದೆನದೆ ಮನವಿಟ್ಟು !

೨) ಮನುಷ್ಯ ವಹಿಸಿಕೊಟ್ಟಿರುವ ಕುಟುಂಬ ಯೋಜನೆ.

೩) ಮ್ಯಾಲೆ ಹತ್ತಿದರೂ ತಲೆ ಕೆಳಗಾಗಿ ನೇತಾಡುವುದು ತಪ್ಪಿದ್ದಲ್ಲ.

೪) ನಾವೇನಿದ್ದರೂ ಗಳಿಗೆ ಗೆಲುವಿನ ಮಾನವರು !

೫) ಗಂಡನಿದ್ದರೂ ಹೆಸರು ಹೇಳುವಂತಿಲ್ಲ.

*ಪ್ರ3)* ಅ) ಎರಡಕ್ಕೆ ಟಿಪ್ಪಣಿ ಬರೆಯಿರಿ: [2×2=4]

ಜಿ.ಪಿ.ರಾಜರತ್ನಂ, ಈ ಮರ, ಪಾತರಗಿತ್ತಿ, ತಾಯಿ.

ಆ) ಒಂದು ವಿಷಯ ಕುರಿತು ಸ್ವಂತ ಅಭಿಪ್ರಾಯವನ್ನು ಬರೆಯಿರಿ. [1×4=4]

೧) ನಗರದ ಯಾಂತ್ರಿಕ ಬದುಕು.

೨) ಲಿಂಗ ಸಮಾನತೆ ಕುರಿತು ನಿಮ್ಮ ಅಭಿಪ್ರಾಯ.

*ಪ್ರ4)* ಒಂದು ಪ್ರಶ್ನೆಗೆ ಉತ್ತರಿಸಿ: [10]

೧) 'ನಲ್ಲೀ ತಾವ್ ನಂ ಮಲ್ಲೀ' ಕವಿತೆ ಅಭಿವ್ಯಕ್ತಿಸಿರುವ ಮಲ್ಲಿಯ ಬಹುರೂಪಿ ವ್ಯಕ್ತಿತ್ವವನ್ನು ವಿವರಿಸಿ.

೨) 'ಎಲ್ಲರೊಳಗೊಂದಾಗು – ಮಂಕುತಿಮ್ಮ' ಕಾವ್ಯಭಾಗದಲ್ಲಿರುವ ನೈತಿಕ ಮೌಲ್ಯಗಳನ್ನು ವಿವರಿಸಿ.

*ಪ್ರ5)* ಎರಡು ಪ್ರಶ್ನೆಗಳಿಗೆ ಉತ್ತರಿಸಿ: [2×5=10]

೧) ಧಮನಿತ ಹೆಣ್ಣಿನ ದುರಂತ ಸ್ಥಿತಿಯ ಅಭಿವ್ಯಕ್ತಿ – 'ದೇವದಾಸಿ' ಕವಿತೆ.

೨) 'ಆ ಮರ ಈ ಮರ' ಕವಿತೆಯ ಸ್ವಾರಸ್ಯ.

೩) ಹಸಿಮಣ್ಣಿಗಾಗಿ ಹಾತೊರೆಯುವ ಹೆಣ್ಣಿನ ಹಂಬಲ.

೪) ಜೀವ ವಿನಾಶಕ್ಕೆ ಕಾರಣವಾಗುತ್ತಿರುವ ಅಭಿವೃದ್ಧಿ ಕೇಂದ್ರಿತ ಬೆಳವಣಿಗೆಯ ವಿಡಂಬನೆಯೆ 'ಪಾತರ ಗಿತ್ತಿ ಪರಿಣಾಮ' ಕವಿತೆ.

## ಗದ್ಯಭಾಗ (30 ಅಂಕಗಳು)

*ಪ್ರ6)* ಒಂದು ಪ್ರಶ್ನೆಗೆ ಉತ್ತರಿಸಿ: [10]

೧) ಗಿರಿಜಾಳ ಮುಗ್ಧತೆ ಸಾಮಾಜಿಕ ಅರಿವಾಗಿ ಪರಿವರ್ತನೆಯಾದ ಬಗೆಯನ್ನು 'ಗಿರಿಜಾ ಕಂಡ ಸಿನಿಮಾ' ಕತೆಯ ಹಿನ್ನೆಲೆಯಲ್ಲಿ ವಿವರಿಸಿ.

೨) 'ಪ್ರಯೋಗವೆ ವಿಜ್ಞಾನದ ಅಂತಿಮ ನೆಲೆಯಾಗಬೇಕು' ಎಂಬ ತಾತ್ತ್ವಿಕತೆ 'ಮೂಲಿಕೆ ಬಳ್ಳಿಯ ಸುತ್ತ' ಕತೆಯಲ್ಲಿ ವ್ಯಕ್ತವಾಗಿರುವುದನ್ನು ವಿಶ್ಲೇಷಿಸಿ.

*ಪ್ರ7)* ಒಂದು ಪ್ರಶ್ನೆಗೆ ಉತರಿಸಿ: [10]

೧) ಕನ್ನಡ ಮೌಲ್ವಿಯವರ ಸರ್ವ ಧರ್ಮ ಸಮನ್ವಯದ ವ್ಯಕ್ತಿತ್ವವನ್ನು ಪರಿಚಯಿಸಿ.

೨) ತಾಯ್ತನದ ನಿಜಾರ್ಥ ತಿಳಿಸುವ ಕತೆ 'ಹೊಸ ಹುಟ್ಟು' – ವಿಶದಪಡಿಸಿ.



https://www.uomonline.com

ಪ್ರ8) <u>ಎರಡು</u> ವಿಷಯಗಳನ್ನು ಕುರಿತು ಸಂಕ್ಷಿಪ್ತವಾಗಿ ಉತ್ತರಿಸಿ: [2×

೧) 'ಗಿರಿಜಾ ಕಂಡ ಸಿನಿಮಾ' ಕಥಾ ನಾಯಕ ಸಿದ್ಧರಾಮನ ಪಾತ್ರ ಚಿತ್ರಣ.
೨) ರೈತ ಹೋರಾಟಗಾರ ಪ್ರೊ.ಎಂ.ಡಿ. ನಂಜುಂಡಸ್ವಾಮಿಯವರ ಧೀರೋದಾತ್ತ ವ್ಯಕ್ತಿತ್ವ.
೩) 'ಹೊಸ ಹುಟ್ಟು' ಕತೆಯಲ್ಲಿ ಚಿತ್ರಿತವಾಗಿರುವ ಶಶಿ–ರಮೇಶರ ಆದರ್ಶ ದಾಂಪತ್ಯ
೪) 'ಮೂಲಿಕೆ ಬಳ್ಳಿಯ ಸುತ್ತ' ಕತೆಯಲ್ಲಿರುವ ಮಾರನ ಪಾತ್ರ ವಿಶೇಷ.

## ವಿಭಾಗ – ಆ

**(2018–19 ನೆ ಸಾಲಿನ ಸಿ.ಬಿ.ಸಿ.ಎಸ್. ವಿದ್ಯಾರ್ಥಿಗಳಿಗೆ ಮಾತ್ರ)**

**ಸವಿಸ್ತರ ಪತ್ರ : ಹೊಸಗನ್ನಡ ಸಾಹಿತ್ಯ ಸಂಪುಟ– 2**

**ಕಾವ್ಯ ಭಾಗ (50 ಅಂಕಗಳು)**

ಪ್ರ1) <u>ಒಂದು</u> ಪದ್ಯಭಾಗದ ಭಾವವನ್ನು ಸಂದರ್ಭಸಹಿತ ವಿವರಿಸಿ: [5]

೧) ಗುಡಿಚರ್ಚು ಮಸದಿಗಳ ಬಿಟ್ಟು ಹೊರಬನ್ನಿ
ಬಡತನವ ಬುಡಮಟ್ಟ ಕೀಳಬನ್ನಿ
ಮೌಢ್ಯತೆಯ ಮಾರಿಯನು ಹೊರದೂಡಲೈತನ್ನಿ
ಓ ಬನ್ನಿ, ಸೋದರರೆ, ಬೇಗ ಬನ್ನಿ

೨) ಬೆಟ್ಟ ತೋಟ್ಟಾವ ಕುತನಿಯ ಅಂಗಿ ।
ಹಸಿರು ನೋಡ ತಂಗಿ ।
ಹೊರಟಾವೆಲ್ಲೊ ಜಂಗಿ
ಜಾತ್ರಿಗೇನೋ । ನೆಂದ್ಯದ ಇಲ್ಲೆ ತಾನೋ ।

ಪ್ರ2) <u>ಒಂದು</u> ವಾಕ್ಯದಲ್ಲಿ ಉತ್ತರಿಸಿ. [5×1=5]

೧) ಶ್ರಾವಣ ಮಾಸದಲ್ಲಿ ಬನ ಹೇಗೆ ಶೃಂಗಾರಗೊಂಡಿದೆ?
೨) 'ಹಳು' ಪದದ ಅರ್ಥವೇನು?
೩) ಬ್ರಹ್ಮಾಂಡ ಸಿಟ್ಟು ಯಾವುದಕ್ಕೆ ಬಂತು?
೪) ನಮ್ಮ ನಿಮ್ಮ ಮನಸ್ಸನ್ನು ಮರುಭೂಮಿಯಾಗದ ಹಾಗೆ ತಡೆಗಟ್ಟುವುದು ಯಾವುದು?
೫) 'ಅಮ್ಮನ ಗುಡ್ಡ' ಕವನ ಸಂಕಲನದ ಕರ್ತೃ ಯಾರು?

3) ನಾಲ್ಕು ವಾಕ್ಯಗಳನ್ನು ಸಂದರ್ಭ ಸಹಿತ ವಿವರಿಸಿ: [4×5=20]

೧) ಮಳೆ ಹನಿಗಳು ನಾನು ಶ್ವಪಚನೆಂದು ಹಿಂದೆ ಸರಿಯುತ್ತಿರಲಿಲ್ಲ.
೨) ಸಂಶಯದ ಗಡಿಗಳುದ್ದಕ್ಕು ಸಿಡಿಗುಂಡುಗಳ ಕದನ ನಿಂತೀತು ಹೇಗೆ?
೩) ಗೌಡ ಕ್ಷಮಿಸ್ಯೆ ! ಇರುಳು, ಕಾಣದು.
೪) ಶ್ರಾವಣ ಬಂತು ಮನಿಮನಿಗೆ । ಕೂಡಿ ದನಿದನಿಗೆ.
೫) ಕನ್ನಡಿ ಎಲ್ಲರ ಹಾಗೂ ಇತ್ತು, ಯಾರ ಹಾಗೆಯೂ ಇರಲಿಲ್ಲ.
೬) ಈ ಜೂಜಿನಲ್ಲಿ ನನ್ನಂಥ ಕಾಯಿಗಳಿಗೆ ದಿಕ್ಕೆಲ್ಲಿದೆ?



https://www.uomonline.com

ಪ್ರ4) <u>ಒಂದು</u> ಪ್ರಶ್ನೆಗೆ ಉತ್ತರಿಸಿ: [16]

೧) 'ಕಣಿವೆಯ ಮುದುಕ' ಕವಿತೆಯ ಆಶಯವನ್ನು ಕುರಿತು ವಿವರಿಸಿ.

೨) 'ನಾನೊಂದು ಮರವಾಗಿದ್ದರೆ' ಕವಿತೆ ನಮ್ಮ ಜಾತಿ ವ್ಯವಸ್ಥೆಯನ್ನು ಹೇಗೆ ವಿಡಂಬಿಸುತ್ತದೆ ವಿಶ್ಲೇಷಿಸಿ.

ಪ್ರ5) <u>ಒಂದು</u> ಪ್ರಶ್ನೆಗೆ ಉತ್ತರಿಸಿ: [16]

೧) 'ಪ್ರೀತಿ ಇಲ್ಲದ ಮೇಲೆ' ಕವನದ ಆಶಯವನ್ನು ಕುರಿತು ಬರೆಯಿರಿ.

೨) 'ಸಿಂಹಾವಲೋಕನ' ಕವಿತೆಯ ಜೀವನ ಸಂದೇಶವನ್ನು ವಿಶ್ಲೇಷಿಸಿ.

**ಅವಿಸ್ತರ ಪಠ್ಯ : ಗದ್ಯ ವೈವಿಧ್ಯ ಘಟಕ – ೨ (30 ಅಂಕಗಳು)**

ಪ್ರ6) <u>ಒಂದು</u> ಪ್ರಶ್ನೆಗೆ ಉತ್ತರಿಸಿ: [16]

೧) 'ಶವದ ಮನೆ' ಕಥೆಯು ವ್ಯವಸ್ಥೆಯ ದುಸ್ಥಿತಿಯನ್ನು ಹೇಗೆ ಬಿಂಬಿಸಿದೆ? ವಿವರಿಸಿ.

೨) 'ಜಗತ್ತು ಅಣುಶಕ್ತಿಯ ಕೈಗೊಂಬೆಯಾಗಿದೆ' ಈ ಹೇಳಿಕೆಯನ್ನು ನಾಗೇಶ ಹೆಗಡೆ ಅವರ ಲೇಖನದ ಹಿನ್ನಲೆಯಲ್ಲಿ ವಿಶ್ಲೇಷಿಸಿ.

ಪ್ರ7) <u>ಒಂದು</u> ಪ್ರಶ್ನೆಗೆ ಉತ್ತರಿಸಿ: [16]

೧) ಡಾ. ರಾಜಕುಮಾರ್ ಅವರ ಒಳಗಿದ್ದ 'ಅಪ್ಪಟ ಮನುಷ್ಯತ್ವ'ವನ್ನು ಬರಗೂರು ರಾಮಚಂದ್ರಪ್ಪ ಯಾವ ಸಂಗತಿಗಳ ಮೂಲಕ ಗುರುತಿಸಿದ್ದಾರೆ? ವಿವರಿಸಿ.

೨) ಕಾಲ ಮತ್ತು ಗಡಿಯಾರಗಳ ಕುರಿತು ತೇಜಸ್ವಿ ಅವರ ನಿಲುವೇನು? ವಿವರಿಸಿ.

ಪ್ರ8) <u>ಎರಡು</u> ವಿಷಯಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ: [2×5=10]

೧) 'ಶವದ ಮನೆ' ಕಥೆಯ ನಾಣಿ ಮತ್ತು ಮಹಾದೇವಿಯ ಪಾತ್ರ ಚಿತ್ರಣ.

೨) ಆ್ಯನೆ ಮೋಬರ್ಲಿ ಮತ್ತು ಎಲಿನೋರಾ ಅವರ ಅಮಾನುಷ ಅನುಭವ .

೩) ಅಣುಶಕ್ತಿಯ ಅನಾಹುತಗಳು.

೪) ಡಾ. ರಾಜ್‌ಕುಮಾರ್ ಅವರ 'ಅನ್ನ ತತ್ವ'

& & &



https://www.uomonline.com